ಯಂತ್ರದಂತೆ ಮಂತ್ರಕ್ಕೆ ಮದ್ವೆ ಆದ್ವಿ.'

ಈಗ ಗಾಂಧಿಗೆ ಸುಮ್ಮನಿರಲಾಗಲಿಲ್ಲ.

'ಹಾಗಾದ್ರೆ ನಿನಗೆ ನನ್ನನ್ ಮದ್ವೆ ಆಗೋಕ್ ಇಷ್ಟ ಇರ್ಲಿಲ್ವ?'

'ಇಷ್ಟ ಇಲ್ದಿದ್ರೆ ಮದ್ವೆ ಆಟದಲ್ಲಿ ನಿಮ್ ಹೆಂಡ್ತಿ ಆಗ್ತಿರಲಿಲ್ಲ.'

ಕಸ್ತೂರ್ ಕೂಡಲೇ ಹೇಳಿ ಮತ್ತೆ ಮುಂದುವರೆಸಿದರು:

'ಆಟದ ಮದುವೆ ನಿಜದ ಮದುವೆ ಆದಾಗ ಆನಂದ ಆಯ್ತು. ಆಟವೂ ನಿಜವಾಗುತ್ತೆ ಅಂತ ಆಗ ಗೊತ್ತಾಯ್ತು; ನಿಜವೂ ಆಟ ಆಗುತ್ತೆ ಅಂತ ಆಮೇಲ್ ಗೊತ್ತಾಯ್ತು.'

'ಏನ್ ಮಾತೂಂತ ಆಡ್ತಿದ್ದೀಯ?'

—ಗಾಂಧಿ ಬೇಸರದಿಂದ ಕೇಳಿದರು;

'ನಿನ್ನ ಮದುವೆ ಆಗಿ ನಾನು ಆಟ ಆಡಿದ್ನ?'

'ಹಾಗಲ್ಲ ಬಾಪು' – ಕಸ್ತೂರ್ ಬಾ ಸಮಜಾಯಿಷಿ ನೀಡತೊಡಗಿದರು: 'ಆಟದಲ್ಲಿ ಸೋಲು, ಗೆಲುವು ಎರಡೂ ಇರತ್ತೆ. ಆದರೆ ಅದೆಲ್ಲ ಅನಿಶ್ಚಿತ. ಹಾಗೇ ನಿಮ್ ಜೊತೆ ಸಂಸಾರ. ನೀವು ಆದರ್ಶವಾದಿ. ನಿಮ್ಮ ಆದರ್ಶಕ್ಕನುಗುಣವಾಗಿ ಹೆಂಡ್ತಿಯಾದ ನಾನು ನಡ್ಕೊಳ್ದೇ ಇದ್ರೆ ನನ್ನಮ್ಮ ಹೇಳಿದ ಸೀತೆ, ಸಾವಿತ್ರಿಯರಿಗೆ ಸಿಟ್ಟು ಬರೋಲ್ವ ಬಾಪು?'

'ಇದೇನ್ ವ್ಯಂಗ್ಯಾನ?'

'ಒಮ್ಮೊಮ್ಮೆ ವಾಸ್ತವ ಕೂಡ ವ್ಯಂಗ್ಯದಂತೆ ಕಾಣುತ್ತೆ.'

ಗಾಂಧಿಗೆ ಬೇಸರವಾಯಿತು. ಮಾತಾಡಿದರೆ ಮತ್ತೆ ಜಗಳವಾದೀತು ಅನ್ನಿಸಿತು. ಇಂಥ ಸಂದರ್ಭದಲ್ಲಿ ಸಂಯಮವೇ ಸರಿ ಅಂತ ಸುಮ್ಮನಾದರು. ಕಸ್ತೂರ್‌ಬಾ ಅವರಿಗಿದು ಅರ್ಥವಾಯಿತು. ಅರವತ್ತು ವರ್ಷ ಸಂಸಾರ ಮಾಡಿದವರಿಗೆ ಅಷ್ಟೂ ಅರ್ಥವಾಗದೆ ಇರುತ್ತದೆಯೆ?

ಮಾತಿಗೆ ಮಾತು ಬೆಳೆದಾಗ ಅದು ಹೇಗೊ ಹರಿಯುತ್ತದೆ ಹೊಳೆಯಂತೆ. ಏರುತ್ತಾ, ಇಳಿಯುತ್ತ, ಸಮತೋಲವಾಗುತ್ತ ಸಾಗುವ ಹರಿವಿನಂತೆ; ಆದರೆ ಒಂದು ಕಡೆಯ ಮೌನ ಇದೆಯಲ್ಲ, ಅದರಿಂದ ಎದುರಿಗಿದ್ದವರಿಗೆ ಗೆಲುವು ಎಂದು ತಿಳಿಯಲಾಗದು, ವಾತಾವರಣವೂ ತಿಳಿಯಾಗದು. ಕಸ್ತೂರ್‌ಬಾ ಅವರಿಗಿದು ತಿಳಿದಿತ್ತು, ಲಘು ದಾಟಿಯ ಮಾತಿಗೆ ಇಳಿದರು; ಕೇಳಿದರು.

'ನಾನು ದೊಡ್ಡವಳಾಗಿ, ನಿಮ್ಮನೆ ಸೇರ್ದಾಗ, ರಾತ್ರಿ ನೀವು ಏನ್ ಮಾಡಿದ್ರಿ ನೆನಪಿದ್ಯ?'

'ಈ ವಯಸ್ನಲ್ಲಿ ರಾತ್ರಿ ವಿಷ್ಯ ನೆನಪಿಸ್ ಬೇಡ' ಎಂದು ಗಾಂಧಿ ಸಿಡುಕಿದರು.

'ಅಯ್ಯೋ ಅದ್ಯಾಕಂಗ್ ಸಿಡುಕ್ತೀರಿ. ನೆನಪಿಗೆ ರಾತ್ರಿ, ಹಗಲು ಅನ್ನೊ ವ್ಯತ್ಯಾಸ ಇರಲ್ಲ. ವಯಸ್ಸಿನ್ ಮಾನದಂಡಾನೂ ಇರೊಲ್ಲ, ಅಲ್ವ?'


'ಆಯ್ತು, ಹಾಗೇ ಅಂದ್ಕೊ. ಈಗೇನದು ನಿನ್ನ ನೆನಪು?'

'ರಾತ್ರಿ ಬಂದವ್ರೇ ನಿಮಗದೆಷ್ಟು ಹಸಿವಿತ್ತು!'

ಗಾಂಧಿಗೆ ಅದೆಲ್ಲ ನೆನಪು ಈಗೇಕೆ ಎಂಬ ಕಸಿವಿಸಿ. ಅದೇ ಕಸಿವಿಸಿಯಲ್ಲಿ ಕೊಂಚ ಕೆರಳಿದ ಧಾಟಿಯಲ್ಲಿ ಹೇಳಿದರು:

## ಇಲ್ಲಿಯವರೆಗೆ

ಆಗಾಖಾನ್ ಅರಮನೆ ಅಂಗಳದಲ್ಲಿ ಕಸ್ತೂರ್‌ಬಾ ಚಿತೆ. ತನ್ನ ಸತ್ಯಾನ್ವೇಷಣೆಯ ಬದುಕಿನ ಭಾಗವಾಗಿದ್ದ ಸಂಗಾತಿಯ ಸಾವು ಗಾಂಧಿಯವರನ್ನು ವಿಚಲಿತಗೊಳಿಸಿದೆ. ದೈಹಿಕವಾಗಿ ಅಗಲಿದ ಕಸ್ತೂರ್, ಗಾಂಧಿಯ ಮನಸಿನಲ್ಲಿ ಜೀವಗೊಳ್ಳುತ್ತಿದ್ದಾಳೆ. ನೆನಪಿನಂಗಳದಲ್ಲಿ ಬಾಲ್ಯದ ರಮ್ಯಕ್ಷಣಗಳು. ಕಸ್ತೂರ್ ಮತ್ತು ಗಾಂಧಿ ಗೆಳೆಯರೊಂದಿಗೆ ಆಡುತ್ತಿದ್ದ ಆಟಗಳು, ಆಟದ ಭಾಗವೇ ಆಗಿದ್ದ ಜಗಳಗಳು... ತಾರುಣ್ಯದ ಆ ದಿನಗಳಲ್ಲೇ ಗಾಂಧಿಗೆ ಅಸ್ಪೃಶ್ಯತೆ ಆಚರಣೆಯ ಮೊದಲ ಪರಿಚಯವೂ ಆಯಿತು.



'ಹಸಿವು ಆಗ್ ಬರ್ದೆ ಈಗ್ ಬರುತ್ತ? ಸುಮ್ನಿರು, ಸಾಕು.'

ಕಸ್ತೂರ್‌ಬಾ ಸುಮ್ಮನಿರಲಿಲ್ಲ.

'ಅಲ್ಲ, ಆಗಿದ್ದ ಹಸಿವು ಹೋಗ್ತಾ ಹೋಗ್ತಾ ಉಪವಾಸಕ್ ತಿರುಗ್ತಾ ಅಂತ?' ಎಂದು ಕಸ್ತೂರ್ ಬಾ ಹೇಳಿದಾಗ ಗಾಂಧಿ ಕೂತಲ್ಲೇ ಚಡಪಡಿಸಿದರು.

'ನಾನ್ ಏನ್ ಹೇಳ್ದೆ ಅಂದ್ರೆ – ನೀವು ಉಪವಾಸ ಸತ್ಯಾಗ್ರಹ ಹೆಚ್ಚು ಮಾಡ್ತಾ ಬಂದ್ರಲ್ಲ – ಅದಕ್ ಹೋಲಿಸ್ದೆ.'

'ನಿನ್ ಹೋಲಿಕೆ ಸರಿಯಲ್ಲ. ರಾತ್ರಿ ನಿನ್ ಹತ್ರ ಬಂದಿದ್ದಕ್ಕೂ ಹೋರಾಟದ ಉಪವಾಸ ಸತ್ಯಾಗ್ರಹಕ್ಕೂ ಹೋಲಿಕೆ ಮಾಡಿ ಸತ್ಯಾಗ್ರಹದ ಪಾವಿತ್ರ್ಯ ಕೆಡುಸ್ಬೇಡ.'

'ಯಾಕೆ ಗಂಡ–ಹೆಂಡ್ತಿ ಸಂಬಂಧ ಪವಿತ್ರ ಅಲ್ವ?'

'ನಾನು ಅಪವಿತ್ರ ಅಂತ ಹೇಳ್ಳಿಲ್ಲ. ಹೆಂಗಸರ ಬಗ್ಗೆ ನನಗೆಷ್ಟು ಗೌರವ ಇತ್ತು ಅಂತ ಅರ್ಥ ಮಾಡ್ಕೊ.'

'ಅರ್ಥ ಮಾಡ್ಕೊಳ್ತಾನೇ ಮುದುಕಿ ಆದೆ ಬಾಪು.'

'ನಾನೂ ಮುದುಕ ಆದೆ.'

'ಆದ್ರಿಂದ್ಲೇ ಹಳೇ ನೆನಪು ಯಾವತ್ತೂ ಕಹಿ ಅಲ್ಲ.'

'ಈಗ ನಿನಗೇನ್ ನೆನಪಿಗ್ ಬಂತು ಹೇಳು ಬೇಗ.'

'ಸಮಾಜದಲ್ಲಿ ಸಂಯಮಕ್ಕೆ ಹೆಸರಾದೋರು ಸಂಸಾರದಲ್ಲಿ ಸಂಯಮ ಯಾಕ್ ಕಳ್ಕೋತೀರಿ? ಎಷ್ಟು ಸಾರಿ ಹೇಳಿದ್ದೀನಿ ನಿಮಗೆ?'

ಗಾಂಧಿಗೆ ತಾನು ಅನಗತ್ಯವಾಗಿ ಸಿಡುಕುತ್ತಿರುವೆ ಎನ್ನಿಸಿತು. ಆತ್ಮನಿರೀಕ್ಷೆಯಲ್ಲಿ ಮಾತಾಡದೆ ಮೌನವಾದರು.

ಕಸ್ತೂರ್‌ಬಾಗೆ ತಾನು ಗಂಡ ಗಾಂಧಿಗೆ ಘಾಸಿ ಮಾಡಿದೆನೇನೊ ಅನ್ನಿಸಿತು.

'ನೋಡಿ ಬಾಪು, ನೀವು ಆಗಾಗ್ಗೆ ಹೀಗೇ ಸಿಡುಕ್ತಾ ಇದ್ರಿ. ಆದ್ರೆ ಬರ್‌ಬರ್ತಾ ಮೌನ ತಾಳಿ, ಸಿಡುಕು, ಸಿಟ್ಟು ಎಲ್ಲಾ ಸುಟ್ಕೊಂಡು ಸ್ಫಟಿಕ ಆದ್ರಿ. ನೀವ್ ನೆನಪಿಸ್ಕೊಳ್ಳಿ. ನಮ್ಮ ಮೊದಲ ರಾತ್ರೀನೇ ಸಿಟ್ಟಾಗಿದ್ರಿ. ನನ್ ವಿರುದ್ಧ ಅಲ್ಲ. ಕತ್ತಲ ವಿರುದ್ಧ.'

ಕಸ್ತೂರ್ ನಸು ನಗುತ್ತಾ ನೋಡಿದರು. ಗಾಂಧಿಮುಖ ತನ್ನ ಬಿಗುವನ್ನು ಸಡಿಲಿಸಿಕೊಳ್ತಾ ಇತ್ತು.

'ಮೊದಲ ರಾತ್ರಿ ನೆನಪಿಗಾದ್ರು ಮುಖದಲ್ಲಿ ಮಂದಹಾಸ ಬರ್ಲಿ ಬಾಪು' ಎಂದು ಕಸ್ತೂರ್ ಆತ್ಮೀಯವಾಗಿ ಹೇಳಿದಾಗ ಗಾಂಧಿ ಮುಖದಲ್ಲೊಂದು ಮಂದಹಾಸದ ಬತ್ತಿ ಹತ್ತಿತು.

ಕಸ್ತೂರ್‌ಬಾಗೆ ಇಷ್ಟು ಸಾಕಿತ್ತು.

ಅವರಿಗೂ ಅಂದಿನ ನೆನಪು ಬೇಕಾಗಿತ್ತು.

ಆರಂಭಿಕ ರಾತ್ರಿಯ ನೆನಪು ನಂದಾದೀಪ
ಮುಂದಿನ ಬಾಳಿಗದು ನಾಂದಿ ದೀಪ!

'ಬಾಪು, ನಿಮಗೆ ಹಾವು ಕಂಡ್ರೆ ಎಷ್ಟು ಭಯವೊ ಕತ್ತಲು ಕಂಡ್ರೂ ಅಷ್ಟೇ ಭಯ. ಅದು ಚಿಕ್ಕಂದಿನಲ್ಲೇ ಬೆಳೆದು ಬಂದಂಥ ಭಯ. ಮೊದಲ ರಾತ್ರೀನೇ ಕತ್ತಲ ಮೇಲೆ ಕಾಳಗ ಮಾಡೋದ? ಕತ್ತಲಿಗೆ ಆಕಾರ ಇಲ್ಲ ಅಂತ ನನ್ನ ಮೇಲೆ ಕೆಂಡ ಕಾರೋದ?'

'ಹೌದು; ನಾನ್ ಕೆಂಡವಾಗಿದ್ದೆ, ಕೆಂಡಕ್ ನೀರೂ ನಾನೇ ಆಗಿದ್ದೆ. ಕೆಂಡವಾಗೋದೂ ಆ ಕೆಂಡಕ್ ನೀರಾಗೋದು ಎಂಥ ಯಾತನೆ ಅಂತ ಅನುಭವಿಸ್ದೋರ್ಗೇ ಗೊತ್ತು.'

'ನಿಮ್ಮ ಜೊತೆ ಸಂಸಾರ ಮಾಡಿದ ನನಗೂ ಗೊತ್ತು. ನೀವು ಕೆಂಡವಾಗ್ತಿದ್ರಿ. ಆದ್ರೆ ಕೆಂಡ ಸುರಿದು ಸುಡ್ತಾ ಇರ್ಲಿಲ್ಲ. ನೀವೇ ಉರೀತಾ ಇದ್ರಿ, ಉರೀತಾ ಉರೀತಾ ನೀರಾಗ್ತ ಇದ್ದ ನಿಮ್ಮನ್ನ ಎಷ್ಟ್ ಸಾರಿ ನೋಡಿಲ್ಲ ನಾನು.'

ಕಸ್ತೂರ್ ಮಾತಿನ ಪ್ರಬುದ್ಧತೆಗೆ ಗಾಂಧಿ ಮೂಕವಾದರು.

ಮಾತಿಗಿಲ್ಲಿ ಕೆಲಸವಿಲ್ಲ ಎನ್ನಿಸಿತು. ಹೆಮ್ಮೆಯಿಂದ ಕಸ್ತೂರ್‌ಬಾ ಕಡೆ ನೋಡಿದರು. ಆ ವೇಳೆಗೆ ಕಸ್ತೂರ್‌ಬಾ ನೆನಪಿಗೆ ಸಂದಿದ್ದರು.

* * *

ಗಂಡನ ಮನೆಗೆ ಬಂದ ಮೊದಲ ದಿನ.
ರಾತ್ರಿಯಲ್ಲಿ; ನಿರೀಕ್ಷೆಯ ನಡುಕ;
ಇರುಳಲ್ಲಿ ನರಳುವ ಪುಳಕ;
ಕಾಯುವಿಕೆ ಕಾಂತಿಮಯ;
ಕನಸಿನ ಕಲೆಗಾರಿಕೆ!
ಮನಸಿನ ಅಲೆಗಾರಿಕೆ!

ಮಲಗುವ ಕೋಣೆಯಲ್ಲಿ ಕಾಯುತ್ತಿದ್ದಾರೆ ಕಸ್ತೂರ್‌ಬಾ. ಮದುವೆ ಆಟವಾಡಿದವರೀಗ ನಿಜವಾದ ಗಂಡ–ಹೆಂಡತಿ. ಗಂಡನ ಮನೆಗೆ ಬರುವುದಕ್ಕೆ ಮುಂಚೆ ಅಮ್ಮನಿಂದ ಅದೆಷ್ಟು